## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ

### 2007-08ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಪ್ರಿಯರೇ, 01-06-2008

ಸಂಘದ ವಾರ್ಷಿಕ ಮಹಾಸಭೆಯು ತಾ.29-6-2008ನೇ ರವಿವಾರ ಬೆಳಿಗ್ಗೆ 10-30 ಗಂಟೆಗೆ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ ನಡೆಯಲಿದೆ. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಸ್ವಾಗತ
3. 2006-2007ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯ ಅಂಗೀಕಾರ
4. 2007-2008ನೇ ವರ್ಷದ ಕಾರ್ಯಕ್ರಮಗಳ ವರದಿಯ ಅಂಗೀಕಾರ
5. 2007-2008ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
6. 2008-2009ನೇ ವರ್ಷಕ್ಕೆ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ
7. 2008-2009ನೇ ವರ್ಷಕ್ಕೆ ಲೆಕ್ಕ ಪರಿಶೋಧಕರ ನೇಮಕ
8. ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳು
9. ಧನ್ಯವಾದ

ಸಹಿ/-
ಕಾರ್ಯದರ್ಶಿ

ವಿ.ಸೂ. : ಚರ್ಚೆಯ ವಿಷಯಗಳೇನಾದರೂ ಇದ್ದಲ್ಲಿ ಅದನ್ನು ಮಹಾಸಭೆಯ ಮೂರು ದಿನಗಳಿಗೆ ಮುಂಚಿತವಾಗಿ ಕಾರ್ಯದರ್ಶಿಯವರಿಗೆ ಬರಹ ಮೂಲಕ ತಿಳಿಸಬೇಕು.

## ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.), ಉಡುಪಿ.

ಎಲ್.ನಂ.31017, ವಾದಿರಾಜ ರಸ್ತೆ, ಉಡುಪಿ - 1. ಫೋನ್ : 2522408

### ಬೇಕಾಗಿದ್ದಾರೆ

ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.)ಯಲ್ಲಿ ಕ್ಲಾರ್ಕ್ (Clerk) ಹುದ್ದೆಗೆ ಪದವೀದರ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ತಮ್ಮ ವಯಸ್ಸು, ವಿದ್ಯಾರ್ಹತೆ (ಅಂಕಪಟ್ಟಿಯ ಪ್ರತಿಯೊಂದಿಗೆ) ಇತ್ಯಾದಿ ವಿವರಗಳೊಂದಿಗೆ ತಮ್ಮ ಅರ್ಜಿಯನ್ನು ತಾ.5-7-2008ರ ಒಳಗಾಗಿ ತಲಪುವಂತೆ ಮೇಲೆ ತಿಳಿಸಿದ ವಿಳಾಸಕ್ಕೆ ಪ್ರತ್ಯಕ್ಷವಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಕೇಳಿಕೊಳ್ಳಲಾಗಿದೆ. ಕಂಪ್ಯೂಟರ್ ಅನುಭವವಿರುವವರಿಗೆ ಆದ್ಯತೆಯಿದೆ.

- ಕಾರ್ಯದರ್ಶಿ

## ಸ್ವರ್ಗ-ನರಕ

ಸಂಗ್ರಹ, ಅನುವಾದ : **ಶ್ರೀಮತಿ ಪ್ರಸನ್ನಾ ಪ್ರಕಾಶ್, ಮಣಿಪಾಲ.**

ಒಮ್ಮೆ ಒಬ್ಬ ಸಾಧು ತಮ್ಮ ತಪಸ್ಸಿನ ಶಕ್ತಿಯಿಂದ ದೇವರ ದರ್ಶನ ಪಡೆಯಲು ಶಕ್ತರಾಗಿ ದೇವರೇ ನನಗೆ ಸ್ವರ್ಗ ಹಾಗೂ ನರಕ ಹೇಗಿರುವುದೆಂದು ನೋಡಬೇಕೆನಿಸಿದೆ'' ಎಂದರು. ದೇವರು ಅವರನ್ನು ಕರೆದುಕೊಂಡು ಹೋಗಿ ಎರಡು ಬೃಹದಾಕಾರದ ಬಾಗಿಲುಗಳಲ್ಲಿ ಒಂದು ಬಾಗಿಲನ್ನು ತೆರೆದು ಆ ಸಾಧುವನ್ನು ಒಳಗೆ ಕರೆದುಕೊಂಡು ಹೋದರು. ವಿಶಾಲವಾದ ಕೋಣೆಯಲ್ಲಿ ಒಂದು ದೊಡ್ಡ ಮೇಜಿನ ಮೇಲೆ ದೊಡ್ಡ ಪಾತ್ರೆಯೊಂದರಲ್ಲಿ ಘಮ್ಮೆನ್ನುವ ಪಾಯಸ ತುಂಬಿತ್ತು. ಮೇಜಿನ ಸುತಲೂ ಬಹಳಷ್ಟು ಜನ ಸೇರಿದ್ದರು. ಎಲ್ಲರೂ ಸಣಕಲರೇ. ಪಾಯಸ ಕುಡಿಯಲು ನೂಕು ನುಗ್ಗಲಿತ್ತು. ಎಲ್ಲರೂ ಉದ್ದವಾದ ಸೌಟೊಂದರಿಂದ ಪಾಯಸ ತೆಗೆದುಕೊಳ್ಳಲು ಶಕ್ತರಾದರೂ ಅದನ್ನು ಹೀರಿ ಕುಡಿಯಲು ಸೌಟಿನ ಉದ್ದ ತಡೆಯಾಗಿತ್ತು. ಅಲ್ಲಿನ ಆ ದಯನೀಯ ಸ್ಥಿತಿ ಕಂಡು ಸಾಧು ಮರುಗಿದಾಗ ದೇವರು, ''ನೋಡು, ಇದೇ ನರಕ'' ಎಂದರು.

ನಂತರ ಇಬ್ಬರೂ ಹೊರಬಂದು ಪಕ್ಕದ ಕೋಣೆಯ ಒಳನಡೆದರು. ಅಲ್ಲೂ ಅದೇ ರೀತಿ ದೊಡ್ಡ ಮೇಜು. ಅದರ ಮೇಲೆ ದೊಡ್ಡ ಪಾತ್ರೆಯಲ್ಲಿ ಘಮ್ಮೆನ್ನುವ ಪಾಯಸ. ಅಲ್ಲಿಯೂ ಉದ್ದನೆಯ ಸೌಟು ಹಿಡಿದ ಜನರು. ಆಶ್ಚರ್ಯಕರ ವ್ಯತ್ಯಾಸವೆಂದರೆ ಅಲ್ಲಿ ನೆರೆದಿದ್ದ ಜನರೆಲ್ಲ ಆರೋಗ್ಯದಿಂದ ನಳನಳಿಸುತ್ತಿದ್ದರು. ದಷ್ಟಪುಷ್ಟರಾಗಿದ್ದರು. ನಗುತ್ತ, ಮಾತನಾಡುತ್ತ ಹರ್ಷಚಿತ್ತರಾಗಿದ್ದರು. ಸಾಧು, ''ದೇವರೇ, ಇದು ಸ್ವರ್ಗವೇನು? ಆ ಕೋಣೆಗೂ ಈ ಕೋಣೆಗೂ ಪರಿಸ್ಥಿತಿಯಲ್ಲಿ ಮಾತ್ರ ವ್ಯತ್ಯಾಸ, ಸ್ಥಿತಿ ಒಂದೇ ರೀತಿ. ಯಾಕೆ ಹೀಗೆ'' ಎಂದು ಕೇಳಿದಾಗ ದೇವರೆಂದರು, ''ನೋಡು. ಇಲ್ಲಿ ಜನರು ಪಾಯಸವನ್ನು ಒಬ್ಬರಿಗೊಬ್ಬರು ತಿನ್ನಿಸುತ್ತಿದ್ದಾರೆ. ಅಲ್ಲಿ ನರಕದಲ್ಲಿ ಎಲ್ಲರೂ ತಮ್ಮ ಬಗ್ಗೆ ಮಾತ್ರ ಯೋಚನೆ ಮಾಡುತ್ತ ಸರಿಯಾಗಿ ತಿನ್ನಲಾರದೆ ಸೊರಗಿದ್ದಾರೆ.''

ಈ ಕಥೆ ಕಾಲ್ಪನಿಕವಾದದ್ದು. ಆದರೆ ನಾವಿರುವ ಈ ಭೂಮಿಯನ್ನು ಸ್ವರ್ಗವಾಗಿಸುವ ಇಲ್ಲವೇ ನರಕವಾಗಿಸುವ ಗುಣ ನಾವು ಬದುಕುವ ರೀತಿ ನೀತಿಯಲ್ಲಿದೆ ಎಂಬ ನೀತಿಯನ್ನು ಅದು ಹೇಳುತ್ತದೆ. ''ಒಗ್ಗಟ್ಟಿನಲ್ಲಿ ಬಲವಿದೆ'' ಎಂಬ ನಾಣ್ನುಡಿ ಎಲ್ಲರಿಗೂ ಗೊತ್ತು. Team - work ಎಂದರೇನು? Team ಎಂದರೆ Together, Everyone Achieves More ಅಲ್ಲವೇ?

## ಉಡುಪಿಯಲ್ಲಿ
## ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನ

### ಅರ್ಜಿ ಆಹ್ವಾನ

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2008-2009ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.1-8-2008ರ ಒಳಗೆ ತಲಪುವಂತೆ ಕಳುಹಿಸಬೇಕು. (ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರಗಳೊಂದಿಗೆ ಮತ್ತೆ ಅರ್ಜಿ ಸಲ್ಲಿಸಬೇಕು.)

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

## ಶ್ರೀ ಶಂಕರ ಜಯಂತಿ ಆಚರಣೆ ಮತ್ತು ಹರಿಕೀರ್ತನಾ ವಿದುಷಿ ''ಬಾಲಭಾರತಿ'' ಪ್ರಶಸ್ತಿ ವಿಜೇತೆ-ಹರಿಕಥೆ ಪದ್ಮಾವತಿಯವರ ಸಂಸ್ಮರಣೆ

ದಿನಾಂಕ 16-05-2008ನೇ ಶುಕ್ರವಾರ ಪೂರ್ವಾಹ್ನ ವೇದಮೂರ್ತಿ ಹೆಚ್. ನಾರಾಯಣ ಭಟ್ ಮೆಮೋರಿಯಲ್ ಟ್ರಸ್ಟ್(ರಿ.) ಹಳೆಯಂಗಡಿ ವತಿಯಿಂದ ಹರಿಕಥೆ ಪದ್ಮಾವತಿಯವರ ಸಂಸ್ಮರಣೆ ಪುಸ್ತಕ ಬಿಡುಗಡೆ ಮತ್ತು ಶ್ರೀ ಶಂಕರ ಜಯಂತಿ ಆಚರಣೆ ಸಮಾರಂಭವು ಪಡುಬಿದ್ರಿಯಲ್ಲಿ ಗಿರಿಜಮ್ಮ ಭೋಜರಾಯರ ಸ್ವಗೃಹ ''ಶಿವಾತ್ಮಜ''ದಲ್ಲಿ ಜರಗಿತು. ಸಭೆಯ ಅಧ್ಯಕ್ಷತೆಯನ್ನು ನಿವೃತ್ತ ಪ್ರೊಫೆಸರ್ ಕಂಕನಾಡಿಯ ಎಂ. ರಘುರಾಮ ರಾಯರು ವಹಿಸಿದ್ದರು. ಪದ್ಮಾವತಿಯವರ ಅಳಿಯ ಹಾಗೂ ಪಣಂಬೂರು ಕರ್ನಾಟಕ ಬ್ಯಾಂಕ್ ಶಾಖೆಯ ನಂದಳಿಕೆ ಬಾಲಚಂದ್ರರಾಯರು ಹರಿಕಥೆ ಪದ್ಮಾವತಿಯವರ ಸಂಸ್ಮರಣಾ ಭಾಷಣ ಮಾಡಿದ ನಂತರ ಬಜಪೆ ವಿಮಾನ ನಿಲ್ದಾಣ ನಿರ್ದೇಶಕರಾದ ಮಾರ್ಪಳ್ಳಿ ವಾಸುದೇವ ರಾಯರು ಹರಿಕೀರ್ತನಾ ವಿದುಷಿ, ''ಬಾಲಭಾರತಿ'' ಪ್ರಶಸ್ತಿ ವಿಜೇತೆ-ಹರಿಕಥೆ ಪದ್ಮಾವತಿಯವರ ಸಂಸ್ಮರಣೆ ಎಂಬ - ನಿವೃತ್ತ ಶಿಕ್ಷಕ ಅದಮಾರಿನ ವೈ. ಎಂ. ಶ್ರೀಧರರಾಯರು ಬರೆದ ಪುಸ್ತಕವನ್ನು ಬಿಡುಗಡೆಗೊಳಿಸಿ, ವಿತರಿಸಿದ ನಂತರ ಶ್ರೀ ಶಂಕರ ಭಗವತ್ಪಾದರ ಸ್ಮರಣೆ ಮಾಡಿದರು. ಉಡುಪಿ ಕುಂಜಿಬೆಟ್ಟು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕಾರ್ಯದರ್ಶಿ ವೈ. ಭುವನೇಂದ್ರರಾಯರು ಪುಸ್ತಕದ ಕುರಿತು ಸಂದರ್ಭೋಚಿತವಾಗಿ ವಿವರಣೆಯೊಂದಿಗೆ ಮೆಚ್ಚುಗೆಯ ಮಾತುಗಳನ್ನಾಡಿದರು.

ಹರಿಕಥೆ ಪದ್ಮಾವತಿಯವರ ಹಿರಿಯ ಪುತ್ರ ಮಾರ್ಪಳ್ಳಿ ಗಂಗಾಧರರಾಯರು ತನ್ನ ತಾಯಿಯ ನೆನಪಿನ ಮಾತುಗಳನ್ನು ಭಾವನಾತ್ಮಕವಾಗಿ ಸ್ಮರಿಸಿಕೊಂಡರು. ಅಧ್ಯಕ್ಷರ ಭಾಷಣದ ನಂತರ ವೈ. ಎಂ. ಶ್ರೀಧರರಾವ್ ದಂಪತಿಗಳನ್ನು ಹರಿಕಥೆ ಪದ್ಮಾವತಿಯವರ ಮಕ್ಕಳೆಲ್ಲರೂ ಸೇರಿಕೊಂಡು ಸನ್ಮಾನಿಸಿ ಗೌರವಿಸಿದರು. ಪದ್ಮಾವತಿಯವರ ಮಗಳು ವಿಜಯಲಕ್ಷ್ಮಿ ಬಾಲಚಂದ್ರ ರಾವ್ ತನ್ನ ತಾಯಿ ಬಹಳವಾಗಿ ಮೆಚ್ಚಿಕೊಂಡಿದ್ದ ''ಶ್ರೀ ಶಾರದೆ''ಯ ಕುರಿತು ಶುಶ್ರಾವ್ಯದ ಹಾಡೊಂದನ್ನು ಹಾಡಿದ ನಂತರ - ಕಾರ್ಯಕ್ರಮವನ್ನು ವೇದಮೂರ್ತಿ ಹೆಚ್. ನಾರಾಯಣ ಭಟ್ ಟ್ರಸ್ಟ್ (ರಿ.)ಯ ಸಂಚಾಲಕ ಡಾ। ಹರಿಕೃಷ್ಣ ಭಟ್ ಸಂಯೋಜಿಸಿದ್ದರೆ- ಅವರ ಸಹೋದರ ಹಾಗೂ ಟ್ರಸ್ಟ್ ಧರ್ಮದರ್ಶಿ ಹೆಚ್. ಗಣೇಶ ಭಟ್ ಧನ್ಯವಾದಗಳನ್ನು ಸಮರ್ಪಿಸುವುದರೊಂದಿಗೆ ಸಭಾ ಕಾರ್ಯಕ್ರಮವು ಮುಕ್ತಾಯವಾಯ್ತು.

''ಶಿವಾತ್ಮಜ''ದಲ್ಲಿ ಗಿರಿಜಮ್ಮ ಭೋಜರಾಯರ ಸಹಸ್ರಚಂದ್ರದರ್ಶನ ಶಾಂತಿ ಸಮಾರಾಧನೆ ಸಂಬಂಧ ಆಗಂತುಕರಿಗೆಲ್ಲಾ ಭೋಜನ ಸತ್ಕಾರವೂ ಇತ್ತು.


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್ : 2556536 (R), 2555466 (O)**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಸದಾಶಯ

ಸ್ಥಾನಿಕ ಬ್ರಾಹ್ಮಣ ವಧೂ-ವರರ ಮಾಹಿತಿ ಕೇಂದ್ರ

ಚಿಟ್ಪಾಡಿ, ಉಡುಪಿ.

: ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ :

**ಎಂ. ಸದಾನಂದರಾವ್ ಮತ್ತು ಎಂ. ಸಂತೋಷರಾವ್, ಚಿಟ್ಪಾಡಿ, ಉಡುಪಿ**

**Ph : 2522638, 2523394**